**ಸುನಂದಮ್ಮಾ:** ರೀ ಸರೋಜಮ್ಮ ಕೇಳಿದ್ರಾ... ಎದುರು ಮನೆ ರಾಧಮ್ಮನ ಗಂಡ ಕೋಮಾಕ್ಕೆ ಹೋಗಿದ್ದಾರಂತೆ!

**ಸರೋಜಮ್ಮ:** ಅವರೇನು ಸಾವುಕಾರ್‍ರು, ದುಡ್ಡಿರೋರು. ಎಲ್ಲಿಗಾದ್ರೂ ಹೋಗ್ತಾರೆ ಬಿಡ್ರೀ!

***

**ಪತ್ನಿ:** ರೀ... ಬೆಳಿಗ್ಗೆ ಹೊರಗೆ ಹೋಗುವಾಗ ದೇವರಿಗೆ ನಮಸ್ಕಾರ ಮಾಡಿ ಹೋಗಿ. ಒಳ್ಳೆಯದಾಗುತ್ತೆ.

**ಪತಿ:** ಓಹ್ ಸುಮ್ನಿರಮ್ಮ... ನಮ್ಮ ಮದುವೆ ದಿನ ಹತ್ತಾರು ದೇವರುಗಳಿಗೆ ಕೈ ಜೋಡಿಸಿ, ಅಡ್ಡ ಬಿದ್ದು ನಮಸ್ಕಾರ ಮಾಡಿದೆ. ಏನು ಒಳ್ಳೆದಾಯ್ತು?

***

**ಗುಂಡ:** ನನ್ನ ಮಗ ಇಡೀ ರಾತ್ರಿ ಬುಕ್ ಹಿಡ್ಕೊಂಡೇ ಇರ್ತಾನೆ.

**ತಿಮ್ಮ:** ಆದರೂ ಯಾಕೆ ಅವನು ಫೇಲಾದ?

**ಗುಂಡ:** ಅವನು ಹಿಡ್ಕೊಂಡಿರ್ತಿದ್ದದ್ದು ಮ್ಯಾಕ್‌ಬುಕ್‌ನಲ್ಲಿನ ಫೇಸ್‌ಬುಕ್!

***

**ಗಂಡ:** ಯಾಕೆ ಮಗೂಗೆ ಹೊಡಿತಾ ಇದ್ದೀಯಾ?

**ಹೆಂಡತಿ:** ಚೆನ್ನಾಗಿ ಓದು ಒಳ್ಳೆಯ ಹೆಂಡತಿ ಸಿಕ್ತಾಳೆ ಅಂದ್ರೆ, 'ಅಪ್ಪ ಚೆನ್ನಾಗಿ ಓದಿದ್ದಾರೆ. ಆದರೆ ಅವ್ರಿಗೆ ಏನು ಸಿಕ್ಕಿದೆ' ಅಂತಾನೆ!

***

**ಗುಂಡ:** ಡಾಕ್ಟರ್ ಈ ಮೆಡಿಸಿನ್ ಅನ್ನು ಹೇಗೆ ತಗೋಬೇಕು?

**ಡಾಕ್ಟರ್:** ದುಡ್ಡು ಕೊಟ್ಟು!

***

**ಮಗ:** ಅಪ್ಪ ಕುಡುಕ ಅಂದ್ರೆ ಯಾರಪ್ಪಾ?

**ಅಪ್ಪ:** (ಕಾರು ಡ್ರೈವಿಂಗ್ ಮಾಡ್ತಾ) ಮುಂದೆ ಹೋಗ್ತಿರುವ 4 ಕಾರುಗಳು 8 ಕಾರುಗಳ ಥರಾ ಯಾರಿಗೆ ಕಾಣುತ್ತೋ ಅವನೇ ಕುಡುಕ!

**ಮಗ:** ಅಯ್ಯೋ ಅಪ್ಪ... ಮುಂದೆ ಹೋಗ್ತಿರೋದು 2 ಕಾರು 4 ಅಲ್ಲ!

***

**ಟೀಚರ್:** ಯಾಕೋ ಮಾರ್ಕ್ಸ್ ಕಾರ್ಡಿನಲ್ಲಿ ಮಾರ್ಕ್ಸ್ ತಿದ್ದಿದ್ದಿಯಾ?

**ಬಂಟಿ:** ನೀವೇ ಹೇಳಿದ್ರಲ್ಲ ಮಿಸ್ ನಮ್ಮ ತಪ್ಪನ್ನು ನಾವೇ ತಿದ್ಕೋಬೇಕು ಅಂತ!

***

**ಅಪ್ಪ:** ಮಗನೆ ನೀನು ಪಾಸ್ ಆದ್ರು ಸರಿ ಫೇಲ್ ಆದ್ರು ಸರಿ ಬೈಕ್ ಕೊಡಿಸ್ತೀನಿ.

**ಮಗ:** ಅಪ್ಪ ನಿನ್ನ ಮನಸ್ಸು ದೊಡ್ಡದು! ಲವ್ ಯೂ ಅಪ್ಪ. ಥ್ಯಾಂಕ್ಯು ಸೊ ಮಚ್.

**ಅಪ್ಪ:** ಹಾಗೇನಿಲ್ಲ ಪಾಸ್ ಆದ್ರೆ ಕಾಲೇಜಿಗೆ ಹೋಗುವುದಕ್ಕೆ ಫೇಲ್ ಆದ್ರೆ ಹಾಲು ಮಾರುವುದಕ್ಕೆ!

***




ಇದು ಇ – ಗಣಪತಿ ಅತ್ತೆ. ಕಂಪ್ಯೂಟರಿನಲ್ಲೇ ಪ್ರತಿಷ್ಠಾಪನೆ ಮತ್ತು ಕಂಪ್ಯೂಟರಿನಲ್ಲೇ ವಿಸರ್ಜನೆ.

**ಗಂಡ:** ನಾನು ನಿನಗಾಗಿ ಜಗತ್ತಿನೊಂದಿಗೆ ಜಗಳವಾಡಿ ಮದುವೆಯಾದರೆ, ನೀನು ನನ್ನೊಂದಿಗೆ ಯಾಕೆ ಜಗಳವಾಡುತ್ತಿಯಾ?

**ಹೆಂಡತಿ:** ನೀವೇ ನನ್ನ ಜಗತ್ತು ಅಲ್ವೇನ್ರಿ... ಅದಕ್ಕೆ ನಿಮ್ಮ ಜೊತೆ ಜಗಳವಾಡುತ್ತೇನೆ!

***

**ಮಹಿಳೆ:** ಏರ್‌ಪೋರ್ಟ್‌ಗೆ ಹೋಗಬೇಕು ಬಾಡಿಗೆ ಎಷ್ಟಾಗುತ್ತೆ?

**ಚಾಲಕ:** 650 ರೂಪಾಯಿ ಮೇಡಂ!

**ಮಹಿಳೆ:** ನನ್ನ ಜೊತೆ ನನ್ನ ಗಂಡನೂ ಬಂದ್ರೆ?

**ಚಾಲಕ:** ಆಗ್ಲೂ ಅಷ್ಟೇ ಮೇಡಂ!

**ಮಹಿಳೆ:** (ಗಂಡನ ಕಡೆಗೆ ತಿರುಗಿ) ನೋಡ್ರಿ... ನಿಮಗೆ ಒಂದು ರೂಪಾಯಿಯೂ ಬೆಲೆ ಇಲ್ಲ. ಏನ್ ಬದುಕು ನಿಮ್ದು.

***

ಗಂಡ ಹೆಂಡತಿಗೆ ಒಂದು ಪೆಗ್ ವಿಸ್ಕಿ ಹಾಕಿಕೊಟ್ಟ

**ಹೆಂಡತಿ:** ಛೀ... ಛೀ... ಛೀ... ಇದು ತುಂಬ ಕಹಿ ಇದೆ.

**ಗಂಡ:** ದಿನಾ ಕುಡಿದು ಎಂಜಾಯ್ ಮಾಡ್ತೀರಿ ಅಂತೀಯಲ್ಲ, ಈಗ ಗೊತ್ತಾಯ್ತಾ ನನ್ನ ಕಷ್ಟ ಏನು ಅಂತ. ನಾನೂ ಇದೇ ರೀತಿಯ ಕಹಿಯನ್ನೇ ಕುಡಿಯೋದು. ಅದರ ಕಷ್ಟ ನನಗೆ ಗೊತ್ತು!

***

**ಡಾಕ್ಟರ್:** ಶುಗರ್ ಇದಿಯಾ?

**ಗುಂಡ:** ಮನೆಯಲ್ಲಿದೆ.

**ಡಾಕ್ಟರ್:** ಗ್ಯಾಸ್ ಸಮಸ್ಯೆ ಇದಿಯಾ?

**ಗುಂಡ:** ಬುಕ್ ಮಾಡಿದ್ದೀನಿ. ಇನ್ನೂ ತಂದು ಕೊಟ್ಟಿಲ್ಲ!

ಡಾಕ್ಟರ್: ಕುಡಿತೀರಾ?

**ಗುಂಡ:** ಕುಡಿತೀನಿ. ಆದರೆ ಈಗ ಬೇಡ. ಹೊರಗಡೆ ನನ್ನ ಹೆಂಡ್ತಿ ಇದಾಳೆ. ಮತ್ತೆ ಯಾವಾಗಲಾದರೂ ತರಿಸುವಿರಂತೆ. ಇಬ್ರು ಸೇರಿ ಹಾಕೋಣ!

***

**ಗಂಡ:** ಇಷ್ಟು ಜೋರಾಗಿ ಯಾಕೆ ಅಳುತ್ತಿದ್ದೀಯಾ?

**ಹೆಂಡತಿ:** ನಿನ್ನೆ ಅಡುಗೆ ಮಾಡುವಾಗ ಕೈ ಸುಟ್ಟಿತು.

**ಗಂಡ:** ನಿನ್ನೆ ಸುಟ್ಟರೆ ಇವತ್ಯಾಕೆ ಅಳುತ್ತಿದ್ದಿ?

**ಹೆಂಡತಿ:** ನಿನ್ನೆ ನೀವು ಮನೆಯಲ್ಲಿ ಇರಲಿಲ್ಲವಲ್ಲ!

***

**ಅಮ್ಮ:** ಮಗಾ... ನಿನ್ನ ಹೆಂಡತಿ ಏನು ಕೆಲಸ ಮಾಡಲ್ಲ ಸುಮ್ನೆ ಕೂತಿರ್ತಾಳೆ. ಅದಕ್ಕೆ, ನಾನು ಪಾತ್ರೆ ತೊಳೆಯುವಾಗ, 'ಬಿಡಮ್ಮ ನಾನೇ ಪಾತ್ರೆ ತೊಳಿತೀನಿ' ಅಂತ ನೀನೊಮ್ಮೆ ಅವಳಿಗೆ ಕೇಳುವಂತೆ ನನಗೆ ಹೇಳು. ಆಗಲಾದರೂ ಕೆಲಸ ಮಾಡುತ್ತಾಳೆಯೇ ಅಂತ ನೋಡೋಣ.

**ಮಗ:** (ಅಂತೆಯೇ ಅಮ್ಮ ಮರುದಿನ ಬೆಳಿಗ್ಗೆ ಪಾತ್ರೆ ತೊಳಿವಾಗ) ಅಮ್ಮ ಈ ಕೆಲಸ ನೀನ್ಯಾಕೆ ಮಾಡ್ತೀಯಾ? ನಾನೇ ಮಾಡ್ತೀನಿ ಬಿಡು.

**ಅಮ್ಮ:** ನೀನು ಗಂಡಸು. ಈ ಕೆಲಸ ಎಲ್ಲ ಮಾಡಬಾರದು. ನಾನೇ ಮಾಡ್ತೀನಿ ಬಿಡು.

**ಮಗ:** ಇಲ್ಲಮ್ಮ ಮನೆಗೆಲಸ ಮಾಡೋದ್ರಲ್ಲಿ ಗಂಡು ಹೆಣ್ಣು ಅಂತೇನೂ ಇಲ್ಲ ಬಿಡಮ್ಮ.

**ಸೊಸೆ:** (ಅಮ್ಮ–ಮಗನ ಮಾತು ಕೇಳಿ) ಅಯ್ಯೋ ನೀವು ಹೀಗೆ ಜಗಳ ಆಡಿದ್ರೆ ನನಗೆ ಮುಜುಗರ ಆಗುತ್ತೆ. ಒಂದ್ ಕೆಲಸ ಮಾಡಿ. ಒಂದಿನ ನೀವು ಪಾತ್ರೆ ತೊಳಿಯಿರಿ. ಮತ್ತೊಂದಿನ ಅತ್ತೆ ತೊಳೆಯಲಿ!

***

**ಡಾಕ್ಟರ್:** ಕಲ್ಲೇಶಿ, ಇನ್ಮೇಲೆ ನೀನು ಕನಿಷ್ಠ 10 ಗ್ಲಾಸ್ ನೀರು ಕುಡಿಲೇಬೇಕು.

**ಕಲ್ಲೇಶಿ:** ಅದು ಆಗದ ಮಾತು ಬಿಡ್ರಿ ಪಾ.

**ಡಾಕ್ಟರ್:** ಯಾಕೆ?

**ಕಲ್ಲೇಶಿ:** ನಮ್ಮನ್ಯಾಗೆ ಬರೀ ನಾಲ್ಕೇ ಗ್ಲಾಸ್ ಅದಾವರಿ ಪಾ!

***

**ಹೆಂಡತಿ:** ನೋಡ್ರಿ... ಪಕ್ಕದ ಮನೆಯವರು ತಮ್ಮ ಹೆಂಡತಿನಾ ಪ್ರತಿ ಸಂಡೆ ಆಚೆ ಕರೆದುಕೊಂಡು ಹೋಗ್ತಾರೆ. ನೀವು ಯಾವತ್ತಾದರೂ ಕರೆದುಕೊಂಡು ಹೋಗಿದ್ದೀರಾ?

**ಗುಂಡ:** ನಾನು ನಾಲ್ಕೈದು ಸಲ ಕರೆದೆ ಕಣೇ, ಅವಳು ಬರಲೇ ಇಲ್ಲ.

***

**ನರ್ಸ್:** ರೋಗಿಯನ್ನು ತಟ್ಟಿ ಎಬ್ಬಿಸಿದಳು. ಗಾಢ ನಿದ್ರೆಯಲ್ಲಿದ್ದ ರೋಗಿ ತಡಬಡಾಯಿಸಿ ಎದ್ದು ಕುಳಿತ

**ರೋಗಿ:** ಯಾಕೆ ನನ್ನನ್ನು ಎಬ್ಬಿಸಿದ್ದು?

**ನರ್ಸ್:** ನಿನಗೆ ನಿದ್ದೆ ಗುಳಿಗೆ ಕೊಡಲು ಮರೆತಿದ್ದೆ. ಅದನ್ನು ಕೊಡಲು ಎಬ್ಬಿಸಿದೆ!

ಸಂಗ್ರಹ: **ಶರದ ಕುಲಕರ್ಣಿ,**
ಬೀದರ್